**<u>ಸಾಕ್ಷಿಯನ್ನು ದಿಃ 15.06.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ ಎಸ್ ಎಸ್ ವಕೀಲರಿಂದಃ–</u>**

ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ . ಹುಣಸೂರಿನಲ್ಲಿ ಎಷ್ಟು ಹಿಟ್ಟಿನ ಗಿರಣಿಗಳು ಇದೆ ಎಂದು ನನಗೆ ಗೊತ್ತಿಲ್ಲ . ನಾನು ಗಣೇಶನ ಗುಡಿ ಬಿದಿಯಲ್ಲಿ ವಾಸ ಇದ್ದೇನೆ . ಗಣೇಶನ ಗುಡಿ ಬಿದಿಯಲ್ಲಿ 2 ಹಿಟ್ಟಿನ ಗಿರಣಿಗಳು ಇವೆ . ನಾನು ಹುಟ್ಟಿ ಬೆಳೆದದ್ದೆಲ್ಲ ಹುಣಸೂರಿನಲ್ಲಿ . ಗಣೇಶನ ಗುಡಿಯ ಬಿದಿಯಲ್ಲಿ ದಾವಾ ಆಸ್ತಿಯ ಮುಂದಕ್ಕೆ 3 ಮೀಟರ್ ದೂರದಲ್ಲಿ ಎಡಕ್ಕೆ ಹೋದರೆ ಒಂದು ಸಣ್ಣ ರಸ್ತೆ ಇದೆ ಎಂದರೆ ಸರಿ . ಸದರಿ ರಸ್ತೆಯಲ್ಲಿ ಪುರಿ ಬಟ್ಟಿಗಳು ಇದೆ ಎಂದರೆ ಸರಿಯಲ್ಲ . ಅವು 30 ವರ್ಷಗಳ ಹಿಂದೆ ಇದ್ದವು .

ಮಿಲ್ಲಿನ ಎದುರುಗಡೆಯೇ ನಮ್ಮ ಮನೆ ಇರುತ್ತದೆ . ಸದರಿ ಮಿಲ್ಲಿನಿಂದ ಮೆಣಸಿನಕಾಯಿ ಗಾಟು, ಧೂಳು, ಶಬ್ಧ , ದಸ್ಟ್ ಆದ ಕಾರಣ ನಮಗೆ ಆರೋಗ್ಯದಲ್ಲಿ ತೊಂದರೆ ಆಗುತ್ತಿದ್ದೆ . ನನ್ನ ಹಾಗೂ ನನ್ನ ಕುಟುಂಬದವರಿಗೆಲ್ಲ ವಾರಕ್ಕೊಮ್ಮೆ 15 ದಿನಕ್ಕೊಮ್ಮೆ ಆರೋಗ್ಯದಲ್ಲಿ ಏರು ಪೇರು ಆಗುತ್ತಿದ್ದೆ . ಸದರಿ ತೊಂದರೆಗೆ ವೈದ್ಯರ ಬಳಿ ಹೋಗಿ ಚಿಕಿತ್ಸೆ ಪಡೆದುಕೊಳ್ಳುತ್ತೇವೆ . ಆ ಬಗ್ಗೆ ದಾಖಲೆ ಇಲ್ಲ . ಖಾಸಗಿ ವೈದ್ಯರಾದ ಮಂಟಿ ಸರ್ಕಲ್ ಬಳಿ ಇರುವ ಕರಿಗೌಡ ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಳ್ಳುತ್ತೇವೆ . ಕರಿಗೌಡ ವೈದ್ಯರು ಮೃತರಾಗಿ 20 ವರ್ಷ ಆಯಿತು ಎಂದರೆ ಸರಿ . ಸಾಕ್ಷಿ ಪುನಃ ಈಗ ಅವರ ಮಗ ಡಾಕ್ಟರ್ ಇದ್ದು , ಅವರ ಬಳಿ ತೋರಿಸುತ್ತಿದ್ದೇವೆ ಎನ್ನುತ್ತಾರೆ . ಅವರ ಹೆಸರು ನನಗೆ ಗೊತ್ತಿಲ್ಲ .

ಕರಿಗೌಡ ವೈದ್ಯರ ಮಗ ಕೊತ್ತೆಗಾಲ ಗ್ರಾಮ ಪಿ ಹೆಚ್ ಸಿ ಯಲ್ಲಿ ವೈದ್ಯರು ಎಂದರೆ ನನಗೆ ಗೊತ್ತಿಲ್ಲ . ಅವರ ಮನೆ ಹುಣಸೂರಿನ ಹಳೇ ಕೆ ಎಸ್ ಆರ್ ಟಿ ಸಿ ಬಸ್ ಸ್ಟ್ಯಾಂಡಿನ ಹಿಂದುಗಡೆ ಇದೆ ಎಂದರೆ ಸರಿ . ಅವರ ವಾಸದ ಮನೆಯಲ್ಲಿಯೇ ಕ್ಲಿನಿಕ್ ಇಟ್ಟುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನನಗೆ ಆರೋಗ್ಯದಲ್ಲಿ ಯಾವುದೇ ತೊಂದರೆ ಇಲ್ಲದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನಮಗೆ ನಮ್ಮ ಮನೆಯವರಿಗೆ ಅಲ್ಲದೆ ನಮ್ಮ ನಮ್ಮ ಮನೆಯ ಅಕ್ಕಪಕ್ಕದವರಾದ ಭಾಗ್ಯ , ಗೌರಮ್ಮ , ವರಲಕ್ಷ್ಮಿ , ರಾಮಪ್ಪ ಇತ್ಯಾದಿಯವರುಗಳ ಮನೆಯಲ್ಲಿಯೂ ತೊಂದರೆ ಆಗಿರುತ್ತದೆ . ಸರಸ್ವತಿ ಮಿಲ್ಲಿನ ಮಾಲೀಕರನ್ನು ಹೋಗಿ 2 ಬಾರಿ ತೊಂದರೆ ಆಗುತ್ತಿದ್ದ ಬಗ್ಗೆ ಕೇಳಿರುತ್ತೇವೆ . ಸದರಿಯವರು ಸರಿ ಮಾಡುತ್ತೇನೆ ಎಂದು ಹೇಳಿದ್ದರು . ನಗರಸಭೆ ಹಾಗೂ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ . ಸದರಿ ವಿಚಾರವಾಗಿ ದಾಖಲೆ ಇದೆ . ಮಿಲ್ಲಿನ ಬಾಗಿಲನ್ನು ಮುಚ್ಚಿಸುತ್ತೇವೆ ಎಂದು ಯಾವುದೇ ಅಧಿಕಾರಿಗಳು ನಮ್ಮ ಬಳಿ ಬಂದು ಹೇಳಿಲ್ಲ .

ವಾದಿಯು ಈ ದಾವೆಯನ್ನು ಹಾಕುತ್ತಿರುವ ಸಮಯದಲ್ಲಿ ನಮ್ಮನ್ನು ಸೇರಿಸುವಂತೆ ಕೇಳಿಕೊಂಡಿದ್ದೆವು. ನಮಗೆ ದಾವೆ ಹೂಡಲು ಶಕ್ತಿ ಇಲ್ಲದ ಕಾರಣ ನಾವು ವಾದಿಯವರೊಂದಿಗೆ ಈ ದಾವೆಯಲ್ಲಿ ನಾನು ಸೇರಿಕೊಂಡಿಲ್ಲ . ವಾದಿಯವರಿಗೆ ಮಿಲ್ಲಿನಿಂದ ತೊಂದರೆ ಆಗಿರುವುದನ್ನು ನಾನು ಪ್ರತಿ ದಿನ ನೋಡುತ್ತೇನೆ . ಅದರಿಂದ ವಾದಿಯ ಮನೆ ಕ್ರ್ಯಾಕ್ ಬಿಟ್ಟಿರುತ್ತದೆ , ಅವರ ಮನೆಯಲ್ಲಿ ಧೂಳು , ಗಾಟು ಬರುತ್ತಿರುತ್ತದೆ . ನಾನು ವಾದಿಯವರ ಮನೆಯಲ್ಲಿನ ಧೂಳು , ಗಾಟು ಬರುತ್ತಿರುವುದನ್ನು ನೋಡಿದ್ದೇನೆ . 5-6 ತಿಂಗಳಲಿನ ಹಿಂದೆ ಒಂದು ಬಾರಿ, ಕಳೆದ ತಿಂಗಳಲ್ಲಿ ಒಂದು ಬಾರಿ ಹೋಗಿ ನೋಡಿದ್ದೆ . ವಾದಿಯವರ ಹಿಂದೆ ಮುಂದಿನ ಗೋಡೆಗಳಲ್ಲಿ 4-5 ಕ್ರ್ಯಾಕ್ ಬಿಟ್ಟಿದ್ದೆ . ಮಿಲ್ಲಿನ ಚೆಕ್ಕು ಬಂದಿ ನನಗೆ ಗೊತ್ತಿಲ್ಲ . ಮಿಲ್ಲಿನ ಅಕ್ಕಪಕ್ಕ ಮನೆಗಳು ಇವೆ . ವಾದಿಯವರ ಮನೆಯನ್ನು ಹೊರತು ಪಡಿಸಿ ಬೇರೆಯವರ ಮನೆ ಕ್ರ್ಯಾಕ್ ಬಿಟ್ಟಿರುವುದನ್ನು ನಾನು ನೋಡಿಲ್ಲ. ವಾದಿಯವರ ಯಜಮಾನರ ಹೆಸರು ಬಾಬು . ವಾದಿಯ ಯಜಮಾನರ ಹೆಸರು ಕೃಷ್ಣ ಕುಮಾರ್ ಎಂದರೆ ಸಾಕ್ಷಿಯು ಬಾಬು ಎಂದು ನಾವು ಕರೆಯುತ್ತೇವೆ ಅವರ ಹೆಸರು ನನಗೆ ಗೊತ್ತಿಲ್ಲ ಎನ್ನುತ್ತಾರೆ .

ವಾದಿಯವರು ಶಬ್ಧ ಮಾಲಿನ್ಯದಿಂದ ಲಕ್ಷಾಂತರ ಹಣವನ್ನು ಖರ್ಚು ಮಾಡಿರುತ್ತಾರೆ ಎಂದು ಬರೆಸಿದ್ದು, ಪ್ರತೀ ಬಾರಿ ಆಸ್ಪತ್ರೆಗೆ ಹೋಗಿ ಬಂದಾಗೆಲ್ಲ ಅದರ ಲೆಕ್ಕವನ್ನು ನನಗೆ ಕೊಡುತ್ತಿರಲಿಲ್ಲ . ಆ ರೀತಿ ಲೆಕ್ಕದ ಪುಸ್ತಕ ಇಟ್ಟಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ . ವಾದಿಯ ಯಜಮಾನರು ಧೂಳು , ಶಬ್ಧ ಮಾಲಿನ್ಯ , ವಾಯು ಮಾಲಿನ್ಯದಿಂದ ಬದುಕುಳಿದಿಲ್ಲ ಎಂದು ಹೇಳಿದ್ದು , ಆ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ . ಅವರು

ಮೃತರಾಗಲು ಏನು ಕಾರಣ ಎಂದು ವೈದ್ಯರಲ್ಲಿ ನಾನು ಹೋಗಿ ವಿಚಾರಿಸಿಲ್ಲ . ಆ ವಿಚಾರವಾಗಿ ವಾದಿಯವರು ನನಗೆ ಯಾವುದೇ ದಾಖಲೆಯನ್ನು ತೋರಿಸಿಲ್ಲ .

ನನ್ನ ಪ್ರಮಾಣ ಪತ್ರದಲ್ಲಿ ನಮಗೆ ತೊಂದರೆ ಆಗಿರುವ ಬಗ್ಗೆ ಮಾತ್ರ ಬರೆಸಿರುತ್ತೇನೆ . ವಾದಿಯವರ ಗಂಡ ಕರೋನಾ ಸಮಯದಲ್ಲಿ ಅಂದರೆ 4-5 ವರ್ಷದ ಹಿಂದೆ ಮೃತರಾಗಿರುತ್ತಾರೆ . ವಾದಿಯವರು ಅವರ ಗಂಡ ಕೋವಿಡ್ ಸಮಯದಲ್ಲಿ ಆಕ್ಸಿಜನ್ ಮಾಸ್ಕ್ ತೆಗೆದಿದ್ದರಿಂದ ಮೃತರಾಗಿರುತ್ತಾರೆ ಎಂದು ವಾದಿಯವರು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಾನು ನ್ಯಾಯಾಲಯದಲ್ಲಿ ಕರ್ಕಶ ಶಬ್ಧ ಹಾಗೂ ಧೂಳು ಮಾಲಿನ್ಯ ದಿಂದ ವಾದಿಯ ಗಂಡ ಮೃತರಾಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮಿಲ್ಲು ಸುಮಾರು 80 ವರ್ಷಗಳಿಂದ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಾನು ಹುಟ್ಟಿದ ದಿನದಿಂದಲೂ ಮಿಲ್ಲು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನನಗೆ 5-6 ವರ್ಷ ಇದ್ದಾಗಿನಿಂದಲೂ ಸದರಿ ಮಿಲ್ಲನ್ನು ನೋಡುತ್ತಿದ್ದೇನೆ . ನಾನು ಸುಮಾರು 37 ವರ್ಷಗಳಿಂದ ಮಿಲ್ಲನ್ನು ನೋಡುತ್ತಿದ್ದೇನೆ . ನನ್ನ ತಂದೆ ತಾಯಿ ನನಗಿಂತ 20-25 ವರ್ಷಗಳು ದೊಡ್ಡವರು ಎಂದರೆ ಸರಿ . ಅವರು ಕಂಡ ಹಾಗೆ 60-70 ವರ್ಷಗಳಿಂದಲೂ ಮಿಲ್ಲು ಇದೆ ಎಂದರೆ ಸರಿ . ಗಣೇಶನ ಗುಡಿ ಬೀದಿ ಹೆಚ್ಚು ಜನ ಸಂದಣಿ ಇರುವ ಬೀದಿ ಎಂದರೆ ಸರಿ .

ಗಣೇಶನ ಗುಡಿ ಬೀದಿಯ ಕೆಳಗಡೆ ಇನ್ನೊಂದು ಮಿಲ್ ಇದೆ ಎಂದು ಹೇಳಿದ್ದು , ಅದು ವಾಸುರವರಿಗೆ ಸೇರಿದ್ದು . ವಾಸು ಎನ್ನುವವರು 1 ನೇ ಪ್ರತಿವಾದಿಯ ತಮ್ಮ . ಸದರಿ ಮಿಲ್ಲಿನಿಂದ ಶಬ್ಧ ಬರುತ್ತಿದ್ದೆ , ಗಾಟು ಬರುತ್ತಿದ್ದೆ ಎಂದು ಯಾರು ದಾವೆ ಹಾಕಿಲ್ಲ ಎಂದರೆ ನನಗೆ ಗೊತ್ತಿಲ್ಲ . ಹುಣಸೂರಿನಲ್ಲಿ 48 ಹಿಟ್ಟಿನ ಮಿಲ್ಲುಗಳು ಇವೆ ಎಂದರೆ ನನಗೆ ಗೊತ್ತಿಲ್ಲ . ವಾದಿಯವರ ಯಜಮಾನರ ರೀತಿ ಮಿಲ್ಲಿನ ತೊಂದರೆ ಯಿಂದ ಎಷ್ಟು ಜನ ಮೃತರಾಗಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಾತಾ ಅವರ 78 ನೇ ವಾಯಸ್ಸಿನಲ್ಲಿ ತೀರಿಕೊಂಡಿರುತ್ತಾರೆ , ನನ್ನ ಅಜ್ಜಿ 70 ನೇ ವಾಯಸ್ಸಿನಲ್ಲಿ ತೀರಿಕೊಂಡಿರುತ್ತಾರೆ . ನನ್ನ ಅಜ್ಜಿ ಹಾಗೂ ತಾತಾ ಸದರಿ ಮಾಲಿನ್ಯದಿಂದ ಮೃತರಾಗಿರುತ್ತಾರೆ ಎಂದು ದಾಖಲೆ ನೀಡಿಲ್ಲ . ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಓ ಎಸ್ 115/2022 ಪಿ.ಡಬ್ಲೂಃ2

**ಪಾಟೀ ಸವಾಲು ಃ 2 ನೇ ಪ್ರತಿವಾದಿ ಏಕ ಪಕ್ಷೀಯವಾಗಿರುತ್ತಾರೆ .**

**ಪಾಟೀ ಸವಾಲು ಃ 3 ನೇ ಪ್ರತಿವಾದಿಗಳ ಪರ ಶ್ರೀ ಎಂ ಬಿ ಸಿ ವಕೀಲರಿಂದಃ-**

ಕಾಲಾವಕಾಶ ಕೋರಿದ್ದು , ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.